# ಆರೇನು ಮಾಡುವರು ಅವನಿಯೊಳಗೆ

**Note:** This is very much similar to “ArEnu mADuvaru bhuvanadoLage - ಆರೇನು ಮಾಡುವರು ಭುವನದೊಳಗೆ ”. Small variations are there. This song is listed separately.

1. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The singer has followed the lyrics as in Ref. 1

ರಾಗ: ಕಾಂಬೋಧಿ ತಾಳ: ಝಂಪೆ

ಆರೇನು ಮಾಡುವರು ಅವನಿಯೊಳಗೆ || p ||

ಪೂರ್ವ ಜನ್ಮದ ಕರ್ಮ ಹಣೆಯಲ್ಲಿ ಬರೆದುದಕೆ || ap ||

ಮಾಡಿದಡುಗೆಯು ಕೆಡಲು ಮನೆಯ ಗಂಡನು ಬಿಡಲು
ಕೂಡಿದ್ದ ಸತಿ ತಾನು ಕುಣಿಸ್ಯಾಡಲು
ಗೋಡೆಗೆ ಬರೆದ ಹುಲಿ ಘುಡಿ ಘುಡಿಸಿ ತಿನಬರಲು
ಆಡದಾ ಮಾತುಗಳ ಅಖಿಳರೂ ನಿಜವೆನಲು || 1 ||

ಹೊಲ ಬೇಲಿ ಮೆದ್ದರೆ ಮೊಲವೆದ್ದು ಇರಿದರೆ
ತಲೆಗೆ ತನ್ ಕೈಪೆಟ್ಟು ತಾಕಿದರೆ
ಹೆಳಲು ಹಾವಾದರೆ ಗೆಳೆಯ ರಿಪುವಾದರೆ
ಕಲಸಿಟ್ಟ ಅವಲಕ್ಕಿ ಕಲಪರಟಿ ನುಂಗಿದರೆ || 2 ||

ಹೆತ್ತ ತಾಯಿ ಮಕ್ಕಳಿಗೆ ಹಿಡಿದು ವಿಷ ಹಾಕಿದರೆ

ಮತ್ತೆ ತಂದೆಯು ಹೊರಗೆ ಮಾರಿದರೆ
ತೊತ್ತು ಅರಸಿಗೆ ಪ್ರತಿ ಉತ್ತರವನಾಡಿದರೆ
ಕತ್ತಲೆಯು ಬೆನ್ನಟ್ಟಿ ಕರಡ್ಯಾಗಿ ಕಚ್ಚಿದರೆ || 3 ||

ಕಣ್ಣಿನೊಳಗಿನ ಬೊಂಬೆ ಕಚ್ಚ್ಯಾಡ ಬಂದರೆ
ಹೆಣ್ಣಿನ ಹೋರಾಟ ಹೆಚ್ಚಾದರೆ
ಅನ್ನ ಉಣ್ಣದೆ ಬಹಳ ಅಜೀರ್ಣವಾದರೆ
ಪುಣ್ಯತೀರ್ಥಗಳಲ್ಲಿ ಪಾಪ ಘಟಿಸಿದರೆ || 4 ||

ಏರಿ ಕುಳಿತ ಕೊಂಬೆ ಎರಡಾಗಿ ಮುರಿದರೆ
ಮೇರೆ ತಪ್ಪಿ ವಿಧಿಯು ಮೆರೆದರೆ
ಆರಿದ್ದ ಇದ್ದಲಿಯು ಅಗ್ನಿಯಾಗುರಿದರೆ
ಧೀರ ಪುರಂದರ ವಿಠಲ ನಿನ್ನ ದಯ ತಪ್ಪಿದರೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮತ್ತೊಂದು ಆರ್ತಭಾವದ ಪದ. ಮೂರು ಬಗೆಯ ಕರ್ಮಗಳಲ್ಲಿ ಸಂಚಿತ ಕರ್ಮಗಳಲ್ಲಿಯ ಅನುಭವಿಸುವ ಭಾಗವು ಪ್ರಾರಬ್ಧ ಕರ್ಮ ಅಥವಾ ಪ್ರಾಚೀನ ಕರ್ಮ ಎನಿಸಿಕೊಳ್ಳುತ್ತದೆ. ಪ್ರಾಚೀನ ಕರ್ಮಾನುಭವವು ಯಾರನ್ನು ಬಿಡುವುದಿಲ್ಲವೆಂಬುದು ದಾಸರ ಅಭಿಮತ.

**ಗೋಡೆಗೆ ಬರೆದ ಹುಲಿ...** – ಗೋಡೆಯ ಮೇಲೆ ಬರೆದ ಹುಲಿಯ ಚಿತ್ರವೇ ಪ್ರಾಣವನ್ನು ಪಡೆದು ತನ್ನನ್ನು ತಿನ್ನಬರುವುದಾದರೆ.

**ಆಡಿದ ಮಾತುಗಳ...** – ತಾವು ಆಡದಿದ್ದ ಮಾತುಗಳನ್ನೂ ಆಡಿದರೆಂದು ಎಲ್ಲರೂ ಸಾಧಿಸುವುದಾದರೆ.

**ಮೊಲವೆದ್ದು ಇರಿದರೆ** – ಸಾಧು ಪ್ರಾಣಿಯೂ, ಅಂಜಿಕೆಯ ಸ್ವಭಾವದ್ದೂ ಆದ ಮೊಲ ಕ್ರೂರಿಯಾಗಿ ತನ್ನ ಮುಸುಡಿಯಿಂದ ತಿವಿಯಲು ಬರುವುದಾದರೆ.

**ಹೆಳಲು** – ಹಿಣಿಲ್, ಹೆರಳು; ತಲೆಗೂದಲನ್ನು ಹೆಣೆದು ಓರಣ ಮಾಡಿದ ಜಡೆ.

**ರಿಪು** = ಶತ್ರು

**ಕಲಪರಟಿ** – ಕಲ್ಲಿನ ಪಾತ್ರೆ, ಗಡಿಗೆ.

**ತೊತ್ತು** – ದಾಸಿ, ಕೆಲಸದವಳು.

**ಪಣೆ** = ಹಣೆ

**ಕುಂಬೆ** = ಗೋಡೆ

**ವಿ. ಸೂ.** - ಪ್ರಾಚೀನ ಕರ್ಮವು ಜೀವನದಲ್ಲಿ ಅಕಲ್ಪಿತವಾದ ಅನೇಕ ಆಪತ್ತುಗಳನ್ನು ತಂದೊಡ್ಡುತ್ತಿರುವುದು.

**Classification:** Keerthane
**Ankita:** dhira purandara vittala
**Location:** NA
**Category:** Jeevana Darshana, Virakti
**Sub-Category:** karma, bhumi, pati, patni, hendati, punya, papa, janma, tayi, tande, tirtha, agni, kannu, avalakki, anna,
**Pravachana:** NA